# ಎಸ್. ಟಿ. ಬೇಡಿಕೆ ನಮ್ಮ ಸಂವಿಧಾನ ಬದ್ಧ ಹಕ್ಕು: ಲಚ್ಚಪ್ಪ ಜಮಾದಾರ



ಕಮಲಾಪುರ: ಕೋಲಿ ಸಮಾಜ ಆರ್ಥಿಕವಾಗಿ ಸಾಮಾಜಿಕವಾಗಿ ರಾಜಕೀಯವಾಗಿ ಹಿಂದುಳಿದ ಸಮಾಜವಾಗಿದೆ ಈ ಸಮಾಜ ಸದೃಢವಾಗಬೇಕೆಂದರೆ ಎಸ್‌ಟಿ ಮೀಸಲಾತಿ ಬೇಕೇ ಬೇಕು. ನಾವು ಭಿಕ್ಷೆ ಬೇಡಿದ್ದಿಲ್ಲ ಅದು ನಮ್ಮ ಸಂವಿಧಾನದ ಹಕ್ಕಾಗಿದೆ, ಎಲ್ಲಾ ರಂಗಗಳಲ್ಲಿ ಹಿಂದುಳಿದ ಕೂಲಿ ಸಮಾಜದ ಸರ್ವಾರ್‌ಂಗೀಣ ಅಭಿವೃದ್ಧಿಯಾಗಬೇಕು ಎಂದರೆ ಎಸ್ಟಿ ಮೀಸಲಾತಿಯಿಂದ ಮಾತ್ರ ಸಾಧ್ಯ ಹೀಗಾಗಿ ಎಸ್ಟಿ ಹೋರಾಟಕ್ಕಾಗಿ ಸದಾ ಸಿದ್ಧರಾಗಿರಿ , ನಾವು ಭಿಕ್ಷೆ ಬೇಡುತ್ತಿಲ್ಲ ಎಸ್ ಟಿ ನಮ್ಮ ಸಂವಿಧಾನ ಬದ್ಧ ಹಕ್ಕಾಗಿದೆ ಎಂದು ಕೋಲಿ ಕಬ್ಬಲಿಗ ಎಸ್ ಟಿ ಹೋರಾಟ ಸಮಿತಿಯ ರಾಜ್ಯಾಧ್ಯಕ್ಷ ಲಚ್ಚಪ್ಪ ಜಮಾದಾರ ಹೇಳಿದರು.

ಕಮಲಾಪುರ ತಾಲೂಕಿನ ಹರಕಂಚಿ ಗ್ರಾಮದಲ್ಲಿ ಹಮ್ಮಿಕೊಂಡ ಶೀ ನಿಜ ಶರಣ ಅಂಬಿಗರ ಚೌಡಯ್ಯನವರ 906 ನೇ ಜಯಂತೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಅಂಬಿಗರ ಚೌಡಯ್ಯನವರು 12ನೇ ಶತಮಾನದ ಅವಧಿಯಲ್ಲಿ ಗಾಢವಾಗಿ ಬೇರೂರಿದ್ದ ಜಾತಿಯತೆ ಮೂಡನಂಬಿಕೆ ಲಿಂಗ ಅಸಮಾನತೆಯ ವಿರುದ್ಧ ಸಿಡಿದೆದ್ದ ಬಂಡಾಯ ವಚನಕಾರರು ಎಂದು ಹೇಳಬಹುದು, ಕೋಲಿ ಕಬ್ಬಲಿಗ ಸಮಾಜದಲ್ಲಿ ಒಗ್ಗಟ್ಟಿನ ಕೊರತೆ ಕಂಡು ಬರುತ್ತಿದ್ದು ಒಳ್ಳೆಯ ಬೆಳವಣಿಗೆ ಅಲ್ಲ, ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಹಾಗೂ ಸಂಸ್ಕಾರಗಳನ್ನು ನೀಡಬೇಕು, , ಒಗ್ಗಟ್ಟಾದರೆ ಮಾತ್ರ ಹಕ್ಕುಗಳನ್ನು ಪಡೆಯಲು ಸಾಧ್ಯವಾಗುತ್ತದೆ , ಮಾನವ ಕುಲ ಒಂದೇ, ಇಲ್ಲಿ ಯಾರೂ ಮೇಲೂ ಕೀಳಲ್ಲ, ಎಲ್ಲರಿಗೂ ಸಮಾನವಾದ ಸ್ಥಾನಮಾನ ಅವಕಾಶ ಸಿಗಬೇಕ ಎಂದು ಕಡ್ಡಿ ಮುರಿದಂಗೆ ಹೇಳುವ ಎದೆಗಾರಿಕೆ ಹೊಂದಿದ್ದ ಏಕೈಕ ಶರಣರೆಂದರೆ ಅವರೇ ನಿಜ ಶರಣ ಅಂಬಿಗರ ಚೌಡಯ್ಯನವರು ಎಂದರು.

ಕೋಲಿ ಸಮಾಜದ ಹಿರಿಯ ಮುಖಂಡ ಬಸವರಾಜ ನಾಟೀಕಾರ ಮಾತನಾಡಿ ಸಮಾಜ ಬಾಂಧವರು ಸತ್ಯ, ನ್ಯಾಯ, ಅಹಿಂಸೆ ಮಾಗ9ದಲ್ಲಿ ಸಾಗಬೇಕು, ದುಶ್ಚಟಗಳಿಗೆ ಬಲಿಯಾಗದೆ ಉತ್ತಮ ಸಂಸ್ಕಾರಗಳನ್ನು ಬೇಳೆಸಿಕೊಳ್ಳಬೇಕು, ಮಹಾತ್ಮ ಬಸವೇಶ್ವರರ ನೈತೃತ್ವದಲ್ಲಿ ಹಲವಾರು ವಚನಕಾರರಿದ್ದರು, ಇದದ್ದನ್ನು ಇದ್ದಂಗೆ ವಚನಗಳಲ್ಲಿ ಸಾರಿ ಹೇಳಿದ್ದಾರೆ, ಈ ಕಾರಣದಿಂದಲೇ ಅವರನ್ನು ನಿಜ ಶರಣ ಎಂಬ ಬಿರುದು ದೊರಕಿದೆ, ಎಂದರು.

ಹೋರಾಟ ಸಮಿತಿಯ ರಾಜ್ಯಾಧ್ಯಕ್ಷ ಉಪಾಧ್ಯಕ್ಷ ರಾಮಲಿಂಗ ನಾಟೀಕರ , ಹಿರಿಯ ಮುಖಂಡ ಬಸವರಾಜ ನಾಟೀಕಾರ, ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸುರೇಶ ಲೇಂಗಟಿ ಮಾತನಾಡಿದರು.

ಈ ಸಂದರ್ಭದಲ್ಲಿ ನಾಗೂರು ಗ್ರಾಪಂ ಮಾಜಿ ಅಧ್ಯಕ್ಷ ಶರಣಗೌಡ ಪಾಟೀಲ್ , ಕೋಲಿ ಸಮಾಜದ ತಾಲೂಕು ಅಧ್ಯಕ್ಷ ಅಂಬಾರಾಯ ಜವಳಗಾ, ರಾಮು ಉಮ್ಮರಗಿ, ತಮ್ಮಣ್ಣ, ಜಗನ್ನಾಥ್ ಅಂಕಲಗಿ, ಉದಯಕುಮಾರ್, ಹಣಮಂತ ನಾಯ್ಕೋಡಿ, ಬಾಬುರಾವ್ ನಾಯ್ಕೋಡಿ, ದೇವೇಂದ್ರ ದಂಡೋತಿ, ನಾಗೇಶ ಡೊಂಗರಗಾಂವ, ಶಿವಶರಣಪ್ಪ ಕಂದಗೂಳ, ನಾಗಪ್ಪ ನಾಯ್ಕೋಡಿ, ತೀಥಪ್ಪ ನಾಯ್ಕೋಡಿ, ಶಿವರಾಜ ಇತರರು ಇದ್ದರು.

# ವಿಶ್ವಕ್ಕೆ ಮಾದರಿ ಭಾರತ ಸಂವಿಧಾನ –ಪತ್ರಕರ್ತ ಚಂದ್ರಶೇಖರ ಯರದಿಹಾಳ



ಸಿಂಧನೂರು : ಭಾರತದ ಸಂವಿಧಾನ ವಿಶ್ವಕ್ಕೆ ಮಾದರಿಯಾಗಿದೆ, ಅಂತಹ ಸವಿಧಾನವನ್ನು ರಚಿಸಿದ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರಿಗೆ ಗೌರವ ಸಲ್ಲಿಸುವ ಕೆಲಸ ಪ್ರತಿಯೊಬ್ಬರಿಂದ ಆಗಬೇಕು ಎಂದು ಜಿಲ್ಲಾ ಕಾರ್ಯನಿರತ ಪತ್ರಕರ್ತ ಸಂಘದ ಕಾರ್ಯಕಾರಿ ಮಂಡಳಿಯ ಸದಸ್ಯ ಚಂದ್ರಶೇಖರ ಯರದಿಹಾಳ ಹೇಳಿದರು

ಅವರು ನಗರದ ಕೋಟೆ ಬಡಾವಣೆಯಲ್ಲಿ ಇರುವ ಸೌದಾಗರ್ ಶಾಲೆಯಲ್ಲಿ 77 ನೇ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಸೋಮವಾರ ಮಾತನಾಡಿದರು .

26 ನೇ ಜನವರಿ 1950 ರಂದು ಭಾರತವು ಸಂವಿಧಾನವನ್ನು ಅಂಗೀಕರಿಸಿದ, ಗಣರಾಜ್ಯೋತ್ಸವ ದಿನ ಇಂದು ಆಗಿದೆ, ಪ್ರತಿಯೊಬ್ಬರು ಸಂವಿಧಾನವನ್ನು ಗೌರವಿಸೋಣ ಕಾನೂನು ಅಡಿಯಲ್ಲಿ ಪ್ರತಿಯೊಬ್ಬರು ಕಾರ್ಯನಿರ್ವಹಿಸುವ ಕೆಲಸ ಆಗಬೇಕು ಮತ್ತು ದೇಶದ ಸಂಸ್ಕೃತಿಯನ್ನು ಎತ್ತಿಡುವ ಕೆಲಸ ಆಗಬೇಕು ಎಂದರು.

ಸಾಹಿತಿ ವೆಂಕಣ್ಣ ಆಚಾರ್ಯ ಜೋಶಿ ಮಾತನಾಡಿ ದೇಶದ ಮಹಾತ್ಮರನ್ನು ನೆನಪಿಸಿಕೊಳ್ಳುವ ಕೆಲಸ ಇಂದಿನ ಯುವಕರಿಂದ ಆಗಬೇಕು, ಆಗ ಮಾತ್ರ ದೇಶದ ಬಗ್ಗೆ ಮತ್ತಷ್ಟು ಜಾಗೃತರಾಗಲು ಸಾಧ್ಯವಾಗುತ್ತದೆ ಎಂದರು.

ಯೋಗ ಗುರು ಎಂ.ಭಾಸ್ಕರ್ ಮಾತನಾಡಿ ಡಾ. ಬಿ.ಆರ್ ಅಂಬೇಡ್ಕರ್ ಅವರ ಆದರ್ಶ, ತತ್ವ,ಸಿದ್ಧಾಂತಗಳನ್ನು ಪಾಲನೆ ಮಾಡಬೇಕು ಆಗ ಮಾತ್ರ ಜೀವನ ಸುಂದರವಾಗಲು ಸಾಧ್ಯವಾಗುತ್ತದೆ, ಯುವಕರು ಆರೋಗ್ಯದ ಕಡೆ ಹೆಚ್ಚು ಹೆಚ್ಚು ಗಮನವಿಸುವ ಕೆಲಸ ಮಾಡಬೇಕು ಎಂದರು.

ಈ ಸಂದರ್ಭದಲ್ಲಿ ಸೌದಾಗರ್ ಸಂಸ್ಥೆಯ ಅಧ್ಯಕ್ಷ ಅಸಾದ್ ಖಾನ್, ಬಾಬರ್ ಸಾಬ್, ಶಿಕ್ಷಕ ರಾಜಣ್ಣ ಸೇರಿದಂತೆ ಇತರರು ಇದ್ದರು.

# ಲಕ್ಷಾಂತರ ಭಕ್ತರ ಮಧ್ಯೆ ಹುಮನಾಬಾದ್ ವೀರಭದ್ರೇಶ್ವರ ರಥೋತ್ಸವ



ಹುಮನಾಬಾದ್: ಐತಿಹಾಸಿಕ ವೀರಭದ್ರೇಶ್ವರ ಜಾತ್ರಾ ಮಹೋತ್ಸವದ ನಿಮಿತ್ತ ಹಿರೇಮಠ ಸಂಸ್ಥಾನದ ಪೀಠಾಧಿಪತಿ ರೇಣುಕವೀರ ಗಂಗಾಧರ ಶಿವಾಚಾರ್ಯರ ಸಾನಿಧ್ಯದಲ್ಲಿ ರಥೋತ್ಸವ ಅದ್ದೂರಿಯಿಂದ ಜರುಗಿತು.

ಸೋಮವಾರ ಸಂಜೆ ದೇವಸ್ಥಾನದಲ್ಲಿ ಉತ್ಸವ ಮೂರ್ತಿಗೆ ರೇಣುಕವೀರ ಗಂಗಾಧರ ಶಿವಾಚಾರ್ಯರು ವಿಶೇಷ ಪೂಜೆ ಸಲ್ಲಿಸಿ ಪಲ್ಲಕ್ಕಿ ಉತ್ಸವಕ್ಕೆ ಚಾಲನೆ ನೀಡಿದರು. ಬಳಿಕ ದೇವಸ್ಥಾನದಿಂದ, ನಾಗಣ್ಣ ಕಟ್ಟಿ, ಬಸವೇಶ್ವರ ವೃತ್ತ, ಬಾಲಾಜಿ ಮಂದಿರ, ಪಟೇಲ್ ವೃತ್ತ, ಅಂಬೇಡ್ಕರ್ ವೃತ್ತ, ಅಗ್ನಿ ಕುಂಡ ಮಾರ್ಗವಾಗಿ ರಥ ಮೈದಾನದ ವರೆಗೆ ಭವ್ಯ ಮೆರವಣಿಗೆ ಜರುಗಿತು.

ರಥ ಮೈದಾನದಲ್ಲಿ ನೆರೆದಿದ್ದ ಭಕ್ತ ಸಾಗರದ ಮಧ್ಯೆ ಗಣ್ಯರ ಸಮ್ಮುಖದಲ್ಲಿ ಹಿರೇಮಠ ಸಂಸ್ಥಾನದ ಪೀಠಾಧಿಪತಿ ರೇಣುಕವೀರ ಗಂಗಾಧರ ಶಿವಾಚಾರ್ಯರು ಧಾರ್ಮಿಕ ಪದ್ಧತಿ ಅನುಸಾರ ಪೂಜೆ ಸಲ್ಲಿಸಿ ರಥೋತ್ಸವಕ್ಕೆ ಚಾಲನೆ ನೀಡಿದರು.

ಮೆವಣಿಗೆ ದಾರಿಯುದ್ದಕ್ಕೂ ಭಕ್ತಾಧಿಗಳು ರಥದ ಮೇಲೆ ಬೆಂಡು, ಬತೋಷಾ, ಕಾರಿಕ್, ಕೊಬ್ಬರಿ ಹಾರಿಸಿ, ಓಂ ಭಲೋ, ಶಂಕರ್ ಭಲೋ, ವೀರಭದ್ರ ಸ್ವಾಮಿಗೆ ಜಯವಾಗಲಿ ಎಂದು ಜಯಘೋಷ ಕೂಗುತ್ತಾ ದೇವರ ದರ್ಶನ ಪಡೆದರು.

ಈ ವೇಳೆ ಶಾಸಕ ಡಾ. ಸಿದ್ದು ಪಾಟೀಲ್, ಮಾಜಿ ಸಚಿವ ರಾಜಶೇಖರ ಪಾಟೀಲ್, ಎಂಎಲ್ಸಿ ಡಾ. ಚಂದ್ರಶೇಖರ ಪಾಟೀಲ್, ಎಂಎಲ್ಸಿ ಭೀಮರಾವ ಪಾಟೀಲ್, ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ವೀರಣ್ಣ ಪಾಟೀಲ್, ಮಲ್ಲಿಕಾರ್ಜುನ್ ಮಾಳಶಟ್ಟಿ, ಸೋಮಶೇಖರ ಬುಳ್ಳ, ಸಂತೋಷ್ ಪಾಟೀಲ್, ಸುನಿಲ್ ಪಾಟೀಲ್ , ಡಿವೈಎಸ್ಪಿ ಮಡೋಳಪ್ಪ ಸೇರಿದಂತೆ ಅನೇಕ ಗಣ್ಯರು ಭಕ್ತರು ಇದ್ದರು

### ಕಣ್ಮನ ಸೆಳೆದ ಸಾಂಸ್ಕೃತಿಕ ಕಾರ್ಯಕ್ರಮ

ಪಲ್ಲಕ್ಕಿ ಮೆವಣಿಗೆ ದಾರಿಯುದ್ದಕ್ಕೂ ನಡೆದ ಡೊಳ್ಳು ಕುಣಿತ, ಪುರವಂತರ ನುಡಿ, ಕೋಲಾಟ, ಡಿಜೆ ಹಾಡುಗಳಿಗೆ ಯುವಕರ ಕುಣಿತ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಅಲ್ಲದೇ ರಥ ಮೈದಾನದಲ್ಲಿ ಅಳವಡಿಸಿದ ಬಣ್ಣ ಬಣ್ಣದ ಸುಡುಮದ್ದುಗಳು ಗಮನ ಸೆಳೆದವು.

# ಸೌಹಾರ್ದತೆ –ಸಮಾನತೆ ಪ್ರಜಾಪ್ರಭುತ್ವದ ತಾತ್ವಿಕತೆ : ಬರಗೂರು ರಾಮಚಂದ್ರಪ್ಪ



ಬಸವಕಲ್ಯಾಣ: ಸಂವಾದಗಳು ಸಾಧ್ಯವಾಗದ ಕಾಲಘಟ್ಟದಲ್ಲಿ ಇದ್ದೇವೆ. ಸಂವಾದ, ವಾಗ್ವಾದಗಳು ಪ್ರಜಾಪ್ರಭುತ್ವ ಜೀವಂತಿಕೆಗೆ ಪ್ರಧಾನ ಸತ್ವವಾಗಿವೆ. ಸಂವಾದದಲ್ಲಿ ಅಭಿಪ್ರಾಯ, ಭಿನ್ನಾಭಿಪ್ರಾಯ, ಸಹಿಷ್ಣುತೆಗಳಿಗೆ ಮನ್ನಣೆ ದೊರೆಯುತ್ತದೆ ಎಂದು ಹಿರಿಯ ಚಿಂತಕ ಪ್ರೊ. ಬರಗೂರು ರಾಮಚಂದ್ರಪ್ಪ ಹೇಳಿದರು.

ನಗರದ ಬಸವಕಲ್ಯಾಣ ಇಂಜಿನಿಯರಿಂಗ್ ಕಾಲೇಜು ಸಹಯೋಗದಲ್ಲಿ ಡಾ. ಜಯದೇವಿತಾಯಿ ಲಿಗಾಡೆ ಪ್ರತಿಷ್ಠಾನದಿಂದ ಹಮ್ಮಿಕೊಂಡಿದ್ದ ಪ್ರತಿಷ್ಠಾನದ 96ನೇ ಉಪನ್ಯಾಸ ಸಮಾರಂಭದಲ್ಲಿ 'ಕನ್ನಡ ಸಾಹಿತ್ಯ: ಸಮಾನತೆ ಮತ್ತು ಸೌಹಾರ್ದತೆ ' ಕುರಿತು ಮಾತನಾಡಿದ ಅವರು, ಬಹುತ್ವ ಹಾಗೂ ಏಕತ್ವಗಳ ಒಂದತ್ವಗಳೆ ಸೌಹಾರ್ದತೆಯಾಗಿದೆ ಎಂದರು.

ವಿವೇಕ ಜಾಗದಲ್ಲಿ ಉದ್ರೇಕ, ಸತ್ಯದ ಜಾಗದಲ್ಲಿ ಅಸತ್ಯ ಬಂದು ನೆಲೆಸಿವೆ. ವಿಚಾರ ಮತ್ತು ವಿಕಾರಗಳ ನಡುವಿನ ಅಂತರ ಕಡಿಮೆಯಾಗಿದೆ ಎಂದರು.

ಕನ್ನಡ ಸಾಹಿತ್ಯ ಜಾತಿ– ಕುಲ ವ್ಯವಸ್ಥೆಯನ್ನು, ಲಿಂಗ ತಾರತಮ್ಯವನ್ನು ವಿರೋಧಿಸಿದೆ. ಪರಂಪರೆಗೆ ಚಲನಶೀಲತೆ ಇರುತ್ತದೆ. ಸಂಪ್ರದಾಯಕ್ಕೆ ಜಡತೆ ಇರುತ್ತದೆ. ಸಂಸ್ಕೃತಿಯೂ ಏಕ ಕಾಲದಲ್ಲಿ ಚಲನಶೀಲತೆ ಮತ್ತು ಜಡವು ಆಗಿರುತ್ತದೆ ಎಂದರು.

ತನ್ನ ಸಮಾಜದ, ದೇಶದ ಸೌಹಾರ್ದತೆಗೆ ಸಮಾನತೆಗೆ ಧಕ್ಕೆ ಬಂದಾಗ ಕಾಲದ ದನಿಯಾಗಿದ್ದು ಸಾಹಿತ್ಯ. ಎಲ್ಲರೂ ಕಾಲದ ದನಿಯಾಗುವ ನಿಟ್ಟಿನಲ್ಲಿ ಪ್ರಯತ್ನಿಸಬೇಕು ಎಂದರು.

ಕನ್ನಡವನ್ನು ಧರ್ಮ ತಾರತಮ್ಯವಿಲ್ಲದೆ, ಲಿಂಗ ತಾರತಮ್ಯವಿಲ್ಲದೆ, ಜಾತಿ ತಾರತಮ್ಯ ವಿಲ್ಲದೆ ಕಟ್ಟಲಾಗಿದೆ. ಜೈನರು, ಲಿಂಗಾಯತರು, ಬ್ರಾಹ್ಮಣರು, ಕ್ರೈಸ್ತರು ಎಲ್ಲರು ಕನ್ನಡ ಜಗತ್ತನ್ನು ಕಟ್ಟಿದ್ದಾರೆ. ಹಾಗಾಗಿಯೇ ಕನ್ನಡ ಸಾಹಿತ್ಯ ಎಂದಿಗೂ ಸಮಾನತೆ ಮತ್ತು ಸೌಹಾರ್ದತೆ ಪ್ರತಿಪಾದಿಸುತ್ತದೆ ಎಂದರು.

ವಚನ ಸಾಹಿತ್ಯಕ್ಕೆ ಸಾಹಿತ್ಯದ ಮನ್ನಣೆ ದೊರೆತದ್ದು ಎಪ್ಪತ್ತು ಎಂಬತ್ತರ ದಶಕದ ನಂತರ. ಅನಂತರ ವಚನಗಳ ಕುರಿತು ಭಿನ್ನ ಆಯಾಮಗಳಲ್ಲಿ ಅಧ್ಯಯನ ಆರಂಭವಾದವು.

ಕನ್ನಡ ಜಗತ್ತನ್ನು ವೈಚಾರಿಕವಾಗಿ ರೂಪಿಸಿದ್ದು ವಚನಕಾರರು ಎಂದು ಹೇಳಿದರು.

ದೇಹವೇ ದೇಗುಲ, ಶರಣ ಸತಿ ಲಿಂಗ ಪತಿ, ಕಾಯಕವೇ ಕೈಲಾಸ ಇಂಥ ಪರಿಕಲ್ಪನೆ ನೀಡಿದ ವಚನ ಚಳುವಳಿ ಭಕ್ತಿಯ ಖಾಸಗೀಕರಣಕ್ಕೆ ಮಹತ್ವ ನೀಡಿದೆ. ಬಸವಣ್ಣನವರು ರಾಜಾಶ್ರಯದಲ್ಲಿ ಇದ್ದು ಚಳುವಳಿ ರೂಪಿಸಿದ್ದರು. ಪಂಪ ರಾಜಾಶ್ರಯದಲ್ಲಿ ವ್ಯವಸ್ಥೆಯನ್ನು ವಿರೋಧಿಸಿದ್ದನು ಎಂದರು.

ಕರ್ನಾಟಕ ಎಂದರೆ ಬರಿ ನಕಾಶೆಯಲ್ಲ. ನದಿ,ಹಳ್ಳ, ಹಳ್ಳಿ ,ನೆಲ , ಕಾಡು ಎಲ್ಲವೂ ಆಗಿದೆ. ನಿಸರ್ಗದಲ್ಲಿಯೇ ಭೇದ ಭಾವ ಮಾಡುತ್ತೇವೆ.

ನಿಸರ್ಗದಲ್ಲಿ ಯಾವುದು ಕನಿಷ್ಠ, ಶ್ರೇಷ್ಠ ಎಂಬುದಿಲ್ಲ. ಗಂಧದ ಮರ ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಜಾಲಿಮರ. ಕೋಗಿಲೆಯಷ್ಟೆ. ಕಾಗೆಯು ಮುಖ್ಯ. ನಿರಾವರಿ ಎಂದರೆ ನೀರು ಇರದ ಕಡೆಗೆ ನೀರು ಹರಿಸುವುದು. ಭಾವನಾತ್ಮಕವಾಗಿ ಏಕತ್ವದ ಪ್ರತಿಪಾದನೆ ಮತ್ತು ಸಾಂಸ್ಕೃತಿಕವಾಗಿ ಬಹುತ್ವದ ಪ್ರತಿಪಾದನೆ ಇವೆರಡರ ಸೇರುವಿಕೆಯೇ ಸೌಹಾರ್ದತೆಯಾಗಿದೆ ಎಂದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಬೀದರ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಬಿ. ಎಸ್. ಬಿರಾದಾರ ಮಾತನಾಡಿ, ಕನ್ನಡ ಸಾಹಿತ್ಯ ಆರಂಭದಿಂದಲೂ ಸಮಾನತೆ ಮತ್ತು ಸೌಹಾರ್ದತೆಯ ಪಾಠ ಮಾಡುತ್ತಾ ಬಂದಿದೆ. ಅದನ್ನು ಗ್ರಹಿಸುವ, ಅರ್ಥೈಸುವ ಪ್ರಯತ್ನ ಮತ್ತೆ ಮತ್ತೆ ಮಾಡಬೇಕಿದೆ ಎಂದರು.

ಹಿರಿಯ ಸಾಹಿತಿ ಡಾ. ಜಗನ್ನಾಥ ಹೆಬ್ಬಾಳೆ ಅವರು ಮಾತನಾಡಿ, ಕನ್ನಡದ ಸಾಕ್ಷಿ ಪ್ರಜ್ಞೆಯಾಗಿರುವ ಬರಗೂರರು ತಮ್ಮ ಕನ್ನಡ ಪರ ಕೆಲಸಗಳಿಂದ ಮನೆ ಮಾತಾಗಿದ್ದಾರೆ. ಅವರು ತಾಯಿ ಪ್ರೀತಿಯ ಜಾಯಮಾನವರು. ಎಂದಿಗೂ ಈ ನೆಲದ ಪ್ರಜಾಪ್ರಭುತ್ವದ, ಸಮಾನತೆಯ ಬಗೆಗೆ ಧ್ಯಾನಿಸಿದವರು ಎಂದರು.


ಅಧ್ಯಕ್ಷತೆ ವಹಿಸಿದ್ದ ಬಿಇಸಿ ಕಾಲೇಜು ಪ್ರಾಚಾರ್ಯ ಡಾ ಅಶೋಕ ಕುಮಾರ ವಣಗೀರೆ, ಪ್ರತಿಷ್ಠಾನದ ನಿರ್ದೇಶಕ ಡಾ ಭೀಮಾಶಂಕರ ಬಿರಾದಾರ ಮಾತನಾಡಿದರು.

ಬರಗೂರು ರಾಮಚಂದ್ರಪ್ಪ ಅವರು ಬರೆದ ಸೌಹಾರ್ದ ಭಾರತ ಪುಸ್ತಕ ಓದುಗರಿಗೆ ನೀಡುವ ಮೂಲಕ ಸಮಾರಂಭ ಉದ್ಘಾಟಿಸಲಾಯಿತು.

ಅಂತಾರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತ ನಟ ಆಕಾಂಕ್ಷ ಬರಗೂರು, ಉಪ ಪ್ರಾಚಾರ್ಯ ಡಾ ಅರುಣ್ ಕುಮಾರ್ ಯಲಾಲ್, ಪ್ರತಿಷ್ಠಾನದ ನಿರ್ದೇಶಕ ಡಾ ಶಿವಾಜಿ ಮೇತ್ರೆ, ಚಂದ್ರಕಾಂತ ಅಕ್ಕಣ್ಣ, ಸಂಜು ಕುಮಾರ ನಡುಕರ , ಅನೋಜಕುಮಾರ, ಶರಣಪ್ಪ ಗದಲೆಗಾಂವ ಮೊದಲಾದವರಿದ್ದರು.

ರೆಜಿಸ್ಟ್ರಾರ್ ಪ್ರೇಮಸಾಗರ ಪಾಟೀಲ ಸ್ವಾಗತಿಸಿದರು. ಪ್ರತಿಷ್ಠಾನದ ಕಾರ್ಯದರ್ಶಿ ದೇವೇಂದ್ರ ಬರಗಾಲೆ ನಿರೂಪಿಸಿದರು. ಪ್ರತಿಷ್ಠಾನದ ಅಧ್ಯಕ್ಷ ಎಸ್.ಜಿ. ಹುಡೇದ ವಂದಿಸಿದರು.

# ದೇಶ ರಕ್ಷಣೆಗೆ ಎಲ್ಲರೂ ಬದ್ದರಾಗಬೇಕು: ಖ್ಯಾಮಾ



ಔರಾದ್: ಮನೆಯಲ್ಲಿ ಪೋಷಕರು ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರ ನೀಡುವುದು ಕಲಿಸಬೇಕು. ಪ್ರತಿಯೊಬ್ಬರು ರಾಷ್ಟ್ರದ ಬಗ್ಗೆ ಅಪಾರ ಗೌರವವನ್ನು ಹೊಂದಬೇಕು ಎಂದು ವಿಶ್ವ ಹಿಂದು ಪರಿಷತ್ ಅಧ್ಯಕ್ಷ ಜಿಲ್ಲಾಧ್ಯಕ್ಷ ವೀರಶೆಟ್ಟಿ ಖ್ಯಾಮ ಹೇಳಿದರು.

ತಾಲೂಕಿನ ನಾಗೂರ(ಎಂ)ದಲ್ಲಿ ವಿಎಸ್‌ಪಿ ತಾಲೂಕು ಅಧ್ಯಕ್ಷರಾಗಿ ಆಯ್ಕೆಯಾದ ಬಸವರಾಜ ಮಾದಪ್ಪ ಮಾನೂರೆ ಅವರ ಅಭಿಮಾನ ಬಳಗದವರಿಂದ ಸೋಮವಾರ ಹಮ್ಮಿಕೊಂಡ ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಗೋರಕ್ಷಣೆ ಮತ್ತು ದೇಶದ ರಕ್ಷಣೆಗಾಗಿ ಎಲ್ಲರು ಬದ್ದರಾಗಬೇಕು. ರಾಷ್ಟ್ರ ಸುಭದ್ರವಾಗಿರಬೇಕೆಂದರೇ ಎಲ್ಲರು ಒಗ್ಗಟ್ಟಿನ ಮಂತ್ರದಿಂದ ಮುನ್ನಡೆಯಬೇಕು. ಸೇವಾ, ಸುರಕ್ಷೆ , ಸಂಸ್ಕಾರವೆಂಬ ಧ್ಯೇಯ ವಾಕ್ಯವನ್ನಿಟ್ಟುಕೊಂಡು ಯುವಕರಲ್ಲಿ ದೇಶಭಕ್ತಿ, ಧರ್ಮ ಶ್ರದ್ಧೆಯನ್ನು ಮೂಡಿಸಿ ,ಅವರನ್ನು ರಾಷ್ಟ್ರಕಾರ್ಯದಲ್ಲಿ ತೊಡಗಿಸುವ ಕಾರ್ಯಕ್ಕೆ ಎಲ್ಲರು ಕೈಜೋಡಿಸಬೇಕಾಗಿದೆ ಎಂದರು.

ವಿಶ್ವ ಹಿಂದು ಪರಿಷತ್ ಜಿಲ್ಲಾ ಕಾರ್ಯದರ್ಶಿ ಬಸವರಾಜ ಯದಲಾಪೂರೆ ಮಾರ್ಮಿಕವಾಗಿ ಮಾತನಾಡಿ, ಹಿಂದು ಧರ್ಮದ ರಕ್ಷಣೆ,ಸಮಾಜವನ್ನು ಆರ್ಥಿಕ, ಸಾಮಾಜಿಕ ಮತ್ತು ಧಾರ್ಮಿ ಕವಾಗಿ ಸಶಕ್ತ ಮಾಡಲು ಪಣ ತೊಡಬೇಕು. ಸತ್ಸಂಗ, ಸಂಸ್ಕಾರ, ಸೇವೆ ಸುರಕ್ಷೆ ನೀಡಲು ಸದಾಬದ್ಧರಾಗಬೇಕು. ದೇವಾಲಯ, ಗೋಮಾತೆ ಹಾಗು ಮಾತೆಯರ ರಕ್ಷಣೆಗಾಗಿ ಶ್ರಮಿಸಬೇಕು. ಜಾತಿ, ಮತ, ಭಾಷೆ, ಪ್ರಾಂತ, ಅಸ್ಪೃಶ್ಯತೆ ಮೀರಿದ ಸಾಮರಸ್ಯ ಸಮಾಜದ ನಿರ್ಮಾಣಕ್ಕಾಗಿ ಯುವಕರು ಸದಾಸಿದ್ಧರಿರಬೇಕು ಎಂದರು.

ವಿಶ್ವ ಹಿಂದು ಪರಿಷತ್ ಜಿಲ್ಲಾ ಕಾರ್ಯಕಾರಣಿ ಸದಸ್ಯ ರಾಜಕುಮಾರ ನಾಯ್ಕ ಮಾತನಾಡಿ, ಧರ್ಮೋ ರಕ್ಷಿತಿ ರಕ್ಷಿತಃ ಅನ್ನುವ ಹಾಗೆ ಯುವಕರು ದೇಶ ರಕ್ಷಣೆಗೆ ಪುರುಷ ಸಿಂಹರಾಗಿ ಬಂಡೆಯಂತೆ ಸ್ಥಿರವಾಗಿ ನಿಲ್ಲಬೇಕಾಗಿದೆ. ಆವಾಗ ಮಾತ್ರ ಧರ್ಮದ ವಿಜಯವಾಗುತ್ತದೆ ಎಂದರು.

ಈ ಸಂಧರ್ಭದಲ್ಲಿ ಉಪಾಧ್ಯಕ್ಷ ಚಂದ್ರಕಾಂತ ಜೋಶಿ, ಭಜರಂಗದಳ ತಾಲೂಕು ಸಂಯೋಜಕ ಕೇಶವ ಹಕ್ಕೆ, ಸಂಗಮೇಶ ಕೌಟಗೆ, ವೀರಶೆಟ್ಟಿ ಬಿರಾದರ್, ಬೀರಪ್ಪ, ಭೀಮರಾವ ಪೊಲೀಸಪಾಟೀಲ, ರಾಜಕುಮಾರ ಬಿರಾದರ್, ಶಿವಶರಣಪ್ಪ ಬಿರಾದರ, ಗಣಪತಿ ಎಕ್ಕಂಬೆ, ಗಣಪತಿ ಮೇತ್ರೆ, ಸಂಗಪ್ಪ ಶೇರಿಕಾರ, ಕಪೀಲ, ಸತೀಷ ನಾಗೂರೆ, ಪತ್ರಕರ್ತ ಮಲ್ಲಪ್ಪ ಗೌಡ ಸೇರಿದಂತೆ ಇನ್ನಿತರರಿದ್ದರು.

# ಗ್ಲೋಬಲ್ ಸೈನಿಕ ಅಕಾಡೆಮಿಯಲ್ಲಿ ಗಣರಾಜ್ಯೋತ್ಸವದ ಆಚರಣೆ



ಬೀದರ್: ನಗರದಹೊರವಲಯದಲ್ಲಿರುವ ಗ್ಲೋಬಲ್ ಸೈನಿಕ್ ಅಕಾಡೆಮಿಯು ದಿನಾಂಕ 26 ಜನವರಿ ರಂದು77ನೇ ಗಣರಾಜ್ಯೋತ್ಸವವನ್ನು ಅತಿ ಸಂಭ್ರಮದಿಂದ ಆಚರಿಸಲಾಯಿತು. ಅಕ್ಯಾಡಮಿಯ ಅಧ್ಯಕ್ಷರಾದ ಕರ್ನಲ್ ಶರಣಪ್ಪ ಸಿಕ್ಕನ್ಪುರೆ ಅವರು ಭಾರತಾಂಬೆ ಮತ್ತು ಮಹಾತ್ಮ ಗಾಂಧೀಜಿ ಮತ್ತು ಡಾ. ಬಿ ಆರ್ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಧ್ವಜಾರೋಹಣವನ್ನು ನೆರವೇರಿಸಿ ಕೊಟ್ಟರು. ನಂತರ ಮಕ್ಕಳಿಂದ ಆಕರ್ಷಕ ಪಥ ಸಂಚಲನವು ನಡೆಯಿತು. ಈ ಪಥ ಸಂಚಲನಕ್ಕೆ ಅನುಮತಿಯನ್ನು ಮುಖ್ಯ ಅತಿಥಿಗಳಾದ ಜಿಪಿ ಕ್ಯಾಪ್ಟನ್ ವಿಎನ್‌ಎಲ್ ರೆಡ್ಡಿ, ಭಾರತೀಯ ವಾಯುಪಡೆಯ ಒಬ್ಬ ಗಣ್ಯಅಧಿಕಾರಿ ಮತ್ತು ಪ್ರಸ್ತುತ ಬೀದರನ ಎನ್‌ಸಿಸಿಯ 3 ಕೆ ಎ ಆರ್ ಏರ್ ಸ್ಕ್ವಾಡ್ರ (ಟಿ ) ನ ಕಮಾಂಡಿಂಗ್ ಆಫೀಸರ್ ಆಗಿ ಸೇವೆ ಸಲ್ಲಿಸಿದ್ದಾರೆ. ಖ್ಯಾತ ಅಧಿಕಾರಿ, ಅನುಭವಿ ಏರೋನಾಟಿಕಲ್ ಇಂಜಿನಿಯರ್, ಯುಕೆಡೆಟ್ ಗಳಿಗೆ ಮಾರ್ಗದರ್ಶನ ಮತ್ತು ಅತ್ಯುತ್ತಮ ನಾಯಕರು.ಶಾಲಾ ನಾಯಕ, ಉಪನಾಯಕ, ಶಾಲಾ ಬ್ಯಾಂಡ್ ತಂಡದೊಂದಿಗೆ ನಾಲ್ಕು ತಂಡಗಳಾದ ಕರಿಯಪ್ಪ, ತಿಮ್ಮಯ್ಯ, ಮಾನೆ ಕ್ಷಾ, ಸುಂದರ್ ಜಿ ತಂಡಗಳ ನಾಯಕ ಹಾಗೂ ಉಪನಾಯಕರು ತಂಡಗಳನ್ನು ಮುನ್ನಡೆಸಿ ಅಚ್ಚು ಕಟ್ಟಾಗಿ ಪಥಸಂಚನದಲ್ಲಿ ಹೆಜ್ಜೆ ಹಾಕುತ್ತಾ ಶಿಸ್ತಿನ ಸಿಪಾಯಿಗಳಂತೆ ಮುನ್ನುಗ್ಗಿದರು. ಒಟ್ಟು 250ಕ್ಕೂ ಹೆಚ್ಚು ಮಕ್ಕಳು ಪಥ ಸಂಚನದಲ್ಲಿ ಭಾಗವಹಿಸಿದರು. ಮೊಟ್ಟಮೊದಲ ಬಾರಿಗೆ ಶಾಲೆಯ ಬ್ಯಾಂಡ್ ಸೊಗಸಾದ ತಾಳ ಮತ್ತು ಶಿಸ್ತಿನ ನಡೆಯಲಿ ಎಲ್ಲಾ ಕಂಟಿನ್ನ ಜೆಂಟಗಳನ್ನು ಮುನ್ನಡೆಸುತ್ತಾ ದೇಶಭಕ್ತಿಯ ಆತ್ಮವನ್ನು ಹೋತಿ ಸಂಚಲನದಲ್ಲಿ ಭಾಗವಹಿಸಿ ಆಕರ್ಷಣೆ ತಂದಿತು.ನಿಶ್ಚಿತ ಶಿಸ್ತಿನೊಂದಿಗೆ ಹೆಜ್ಜೆ ಹಾಕುತ್ತಾ ನಮ್ಮಧೈರ್ಯಶಾಲಿಎನ್ನಿಸಿ ತಂಡವು ಶೌರ್ಯ ಮತ್ತು ನಿಷ್ಠೆಯ ಪ್ರತಿಕವಾಗಿ ತಂಡವನ್ನು ಮುನ್ನಡೆಸುತ್ತಿದ್ದರು. ನಂತರ ಕೆಂಪು ಬಣ್ಣದ ಸಮವಸ್ತ್ರವನ್ನು ಧರಿಸಿ ಕರಿಯಪ್ಪ ತಂಡದ ನಾಯಕ ಉಪನಾಯಕ ತಮ್ಮ ತಂಡವನ್ನು ಮುನ್ನಡೆಸಿದರು. ಹಾಗೇ ನೀಲಿ ಬಣ್ಣದ ಸಮಸ್ತ್ರವನ್ನು ಧರಿಸಿ ತಿಮ್ಮಯ್ಯ ತಂಡದ ನಾಯಕ ಮತ್ತು ಉಪನಾಯಕ ತಮ್ಮ ತಂಡವನ್ನು ಮುನ್ನಡೆಸಿದರು.ಹಾಗೆ ಹಸಿರು ಬಣ್ಣದಸಮವಸ್ತ್ರವನ್ನು ಧರಿಸಿ ಮಾನೆಕ್ಷಾ ತಂಡದ ನಾಯಕ ಮತ್ತು ಉಪನಾಯಕರು ತಮ್ಮ ತಂಡವನ್ನು ಮುನ್ನಡೆಸಿದರು. ನಂತರ ಬರುವ ಹಳದಿ ಬಣ್ಣದ ಸಮವಸ್ತ್ರವನ್ನು ಧರಿಸಿ ನಾಯಕ ಮತ್ತು ಉಪನಾಯಕ ತಂಡವನ್ನು ಮುನ್ನಡೆಸಿಕೊಂಡು ಹೋದರು. ಈ ಪಥ ಸಂಚಲನವುಒಂದು ಶಕ್ತಿಯುತ ಸಂದೇಶವನ್ನು ಬಿಟ್ಟು ಹೋಗುತ್ತದೆ ಶಿಸ್ತಿನ ತಲೆಮಾರು ಒಂದು ಬಲಿಷ್ಠ ರಾಷ್ಟ್ರವನ್ನು ನಿರ್ಮಿಸುತ್ತದೆ ನಾವು ಇಂದು ನೋಡುವುದು ನಾಳೆಯ ನಾಯಕತ್ವದ ಅಡಿಪಾಯವಾಗಿದೆ. ಈ ಕ್ಷಣವು ನಮಗೆ ಒಂದು ಪಾಠ ಕಲಿಸುತ್ತದೆ ಪ್ರಗತಿ ಆತುರದಲ್ಲಿ ಆಗುವುದಿಲ್ಲ ಅದುಉದ್ದೇಶಪೂರ್ಣ ಹೆಜ್ಜೆಗಳೊಂದಿಗೆ ಸಾಗುತ್ತದೆಎಂದು ಗ್ಲೋಬಲ್ ಸೈನಿಕ ಅಕಾಡೆಮಿಯ ವಿದ್ಯಾರ್ಥಿಗಳು ತೋರಿಸಿಕೊಟ್ಟಿದ್ದಾರೆ. ಗಣರಾಜ್ಯೋತ್ಸವದ ಅಂಗವಾಗಿ ಅಕಾಡೆಮಿಯಲ್ಲಿ ಅಂತರ ಮನೆ ಕ್ರೀಡಾ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಈ ಸ್ಪರ್ಧೆವು ವಿದ್ಯಾರ್ಥಿಗಳಲ್ಲಿ ಕ್ರೀಡಾ ಮನೋಭಾವ ಸಾಂಗಿಕ ಕೆಲಸ ಮತ್ತು ಪ್ರತಿಭೆಯನ್ನು ಪ್ರದರ್ಶಿಸಲು ಇರುವ ಅತ್ಯುತ್ತಮ ವೇದಿಕೆಯಾಗಿದೆ ಇದು ತಂಡದ ಸ್ಪೂರ್ತಿ ದೈಹಿಕ ಸಾಮಥ್ಯ ಮತ್ತು ಆರೋಗ್ಯಕರ ಸ್ಪರ್ಧೆಯನ್ನು ಉತ್ತೇಜಿಸುತ್ತದೆ. ವಿದ್ಯಾರ್ಥಿಗಳಿಗೆ ತಮ್ಮ ಮನೆಗಳಿಗಾಗಿ ಗೆಲ್ಲುವ ಉತ್ಸಾಹವನ್ನು ನೀಡುತ್ತದೆ. ಶಿಶು ವಿಹಾರ ದಿಂದ 9ನೇ ತರಗತಿಯ ವಿದ್ಯಾರ್ಥಿಗಳೊಂದಿಗೆ ಸ್ಯಾಕ್ ರೇಸ, ಸ್ಕಿಪಿಂಗ್ ಅಥ್ಲೆಟಿಕ್ಸ್ 100 ಮೀಟರ್, ಕಪ್ಪೆ ಜಿಗಿತ, ರಿಲೇ ರೇಸ್ ವಾಲಿಬಾಲ್, ಕಬ್ಬಡಿ,ಕ್ರಿಕೆಟ್, ಥ್ರೋಬಾಲ್,ಹಗ್ಗ ಜಗ್ಗಾಟ ಮುಂತಾದ ಕ್ರೀಡೆಗಳಲ್ಲಿ ವಿದ್ಯಾರ್ಥಿಗಳು ಪಾಲ್ಗೊಂಡು ತಮ್ಮ ಗೆಲುವನ್ನು ಸಾಧಿಸಿದರು. ಕ್ರೀಡೆಗಳಲ್ಲಿ ವಿಜೇತರಾದವರಿಗೆ ಅಧ್ಯಕ್ಷರಿಂದ ಹಾಗೂ ಮುಖ್ಯ ಅತಿಥಿಗಳಿಂದ ಬಹುಮಾನಗಳನ್ನು ವಿತರಿಸಲಾಯಿತು. ಈ ಸಮಾರಂಭವನ್ನು ಕುರಿತು ಕರ್ನಲ್ ಶರಣಪ್ಪ ಸಿಕ್ಕನ್ಪುರೆ ಅವರು ಮಾತನಾಡಿದರುನಮ್ಮ ಯೋಗ್ಯತೆ ಹಾಗೂ ಸಮಯದ ಪರಿಪಾಲನೆಯು ನಮ್ಮ ಪ್ರತಿಷ್ಠೆ ಯಾಗಿದೆ.ನಮ್ಮ ದೇಶ ಆರ್ಥಿಕವಾಗಿ ಮುನ್ನಡೆಯಬೇಕು ನಮಗೆ ಸ್ವಾತಂತ್ರ ದೊರಕಿ ನೂರು ವರ್ಷಗಳನ್ನು ಪೂರ್ಣಗೊಳಿಸಿದ್ದೇವೆ. ಈಗ ನಮ್ಮ ಕನಸು ವಿಕಸಿತ ಭಾರತದಾಗಿದೆ. ನನ್ನ ಒಂದು ಕನಸಾಗಿತ್ತು ನಾನು ಹುಟ್ಟಿದ ಪ್ರದೇಶ ಹಾಗೂ ಹಿಂದುಳಿದ ಪ್ರದೇಶದ ಮಕ್ಕಳ ಸಲುವಾಗಿ ಏನಾದರೂ ಮಾಡಬೇಕೆಂದು ಅದಕ್ಕಾಗಿ ನಾನು ಗ್ಲೋಬಲ್ ಸೈನಿಕ್ ಅಕಾಡೆಮಿಯನ್ನು ತೆರೆದೆ ಇದರಲ್ಲಿ ಮಕ್ಕಳಿಗೆ ಶಿಸ್ತು, ನೈತಿಕ ಮೌಲ್ಯಗಳು, ಹಾಗೂ ಶಿಸ್ತಿನ ಸಿಪಾಯಿಗಳನ್ನು ದೇಶಕ್ಕೆ ಕೊಡುವ ಛಲದಿಂದ ನಾನು ಅವರನ್ನು ಬೆಳೆಸುತ್ತಿದ್ದೇನೆ. ನಾವು ಪ್ರವಾಸೋದ್ಯಮಕ್ಕೆ ಹೋಗಿದ್ದರು ವಾಯುಪಡೆ, ಸೈನ್ಯ ಪಡೆಯ, ರಕ್ಷಣಾ ಪಡೆಗಳ ಮಾಹಿತಿಯನ್ನು ಮಕ್ಕಳಲ್ಲಿ ಮೂಡಿಸಿದ್ದೇವೆ. ಸೈನಿಕ ತರಬೇತಿ ಕೇಂದ್ರಗಳಿಗೆ, ನಾವು ವಿದ್ಯಾರ್ಥಿಗಳಿಗೆ ಕರೆದುಕೊಂಡು ಹೋಗಿದ್ದೇವೆ. ಎಂದು ಕರ್ನಲ್ ಶರಣಪ್ಪ ಸಿಕ್ಕನಪುರೆ ಯವರು ಹೇಳಿದರು. ನಂತರ ಮುಖ್ಯ ಅತಿಥಿಗಳಾದ ಕ್ಯಾಪ್ಟನ್ ವಿಎ???ಲ್ ರೆಡ್ಡಿ ಅವರು ಮಾತನಾಡುತ್ತಾ ಗ್ಲೋಬಲ್ ಸೈನಿಕ ಅಕಾಡೆಮಿಯ ವಿದ್ಯಾರ್ಥಿಗಳ ಪರೇಡ್ ಅತ್ಯುನ್ನತ ಮಟ್ಟದ ಹಾಗೂ ಪ್ರೊತ್ಸಾಹದಾಯಕವಾಗಿತ್ತು. ನಾನು ಅವರ ಬಗ್ಗೆ ಬಹಳಷ್ಟು ಹೆಮ್ಮೆ ಪಡೆಯುತ್ತಿದ್ದೇನೆ.

## ವಾರಕ್ಕೆ ಐದು ದಿನಗಳ ಕೆಲಸ ವ್ಯವಸ್ಥೆ ಜಾರಿಗೆ ತರಬೇಕು ಎಂದು ಬ್ಯಾಂಕ್ ಉದ್ಯೋಗಿಗಳು ಪ್ರತಿಭಟನೆ




ರಾಯಚೂರು: ಬ್ಯಾಂಕಿಂಗ್ ಕ್ಷೇತ್ರದಲ್ಲಿ ವಾರಕ್ಕೆ ಐದು ದಿನಗಳ ಕೆಲಸ ವ್ಯವಸ್ಥೆ ಜಾರಿಗೆ ತರಬೇಕು ಸೇರಿದಂತೆ ಇನ್ನಿತರ ಬೇಡಿಕೆಗಳ ಈಡೇರಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಬ್ಯಾಂಕ್ ಗೆ ಬೀಗ ಹಾಕಿ ಯುನೈಟೆಡ್ ಫೋರಂ ಆಫ್ ಬ್ಯಾಂಕ್ ಯೂನಿಯನ್ಸ್ ನೇತೃತ್ವದಲ್ಲಿ ಮಂಗಳವಾರ ನಗರದ ಮಹಾತ್ಮಗಾಂಧಿ ವೃತ್ತದಲ್ಲಿ ಬ್ಯಾಂಕ್ ಉದ್ಯೋಗಿಗಳು ಪ್ರತಿಭಟನೆ ನಡೆಸಿದರು.

ಉಳಿದ ಶನಿವಾರಗಳನ್ನು ಮುಂದಿನ ದಿನಗಳಲ್ಲಿ ರಜೆ ಮಾಡಲಾಗುವುದು ಎಂಬ ಭರವಸೆ ನೀಡಲಾಗಿತ್ತು. ಆದರೆ ಈ ವಿಷಯವನ್ನು ವರ್ಷಗಳ ಕಾಲ ಬಾಕಿಯೇ ಇಡಲಾಗಿದೆ ಎಂದು ಪ್ರತಿಭಟನಾಕಾರರು ಅಸಮಾಧಾನ ವ್ಯಕ್ತಪಡಿಸಿದರು.

2022ರಲ್ಲಿ ಸರ್ಕಾರ ಮತ್ತು ಐಬಿಎ ಉಳಿದ ಶನಿವಾರಗಳನ್ನು ರಜೆ ಎಂದು ಘೋಷಿಸಲು ಕೆಲಸದ ಸಮಯವನ್ನು ಹೆಚ್ಚಿಸುವ ಕುರಿತು ಐಎಫ್‌ಬಿಯು ಜೊತೆ ಚರ್ಚಿಸಲು ಒಪ್ಪಿಕೊಂಡವು. 2023ರಲ್ಲಿ ನಡೆದ ಚರ್ಚೆಯ ನಂತರ ಸೋಮವಾರದಿಂದ ಶುಕ್ರವಾರದವರೆಗೆ ಪ್ರತಿದಿನದ ಕೆಲಸದ ಸಮಯವನ್ನು 40 ನಿಮಿಷಗಳಷ್ಟು ಹೆಚ್ಚಿಸಿ, ಉಳಿದ ಎಲ್ಲಾ ಶನಿವಾರಗಳನ್ನು ರಜೆ ಎಂದು ಘೋಷಿಸುವುದಾಗಿ ಒಪ್ಪಂದವಾಯಿತು. ಈ ಕುರಿತು ಸರ್ಕಾರಕ್ಕೆ ಅಧಿಕೃತ ಶಿಫಾರಸು ಸಲ್ಲಿಸಲಾಗಿದೆ.

ಆದರೆ ಕಳೆದ ಎರಡು ವರ್ಷಗಳಿಂದ ಸರ್ಕಾರದ ಅನುಮೋದನೆ ಮಾತ್ರ ಇನ್ನೂ ಬಾಕಿಯಾಗಿದೆ ಎಂದು ಹೇಳಿದರು.

ಹಣಕಾಸು ಕ್ಷೇತ್ರದಲ್ಲಿ ಈಗಾಗಲೇ ಆರ್‌ಬಿಐ, ಎಲ್‌ಐಸಿ ಹಾಗೂ ಜಿಐಸಿಗಳಲ್ಲಿ ವಾರಕ್ಕೆ ಐದು ದಿನಗಳ ಕೆಲಸ ವ್ಯವಸ್ಥೆ ಜಾರಿಗೆ ಬಂದಿದ್ದು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕಚೇರಿಗಳು ಮತ್ತು ಷೇರುಪೇಟೆಗಳು ಸಹ ಸೋಮವಾರದಿಂದ ಶುಕ್ರವಾರದವರೆಗೆ ಮಾತ್ರ ಕಾರ್ಯನಿರ್ವಹಿಸುತ್ತಿವೆ.

ಇಂತಹ ಸಂದರ್ಭದಲ್ಲಿ ಬ್ಯಾಂಕ್ ಸಿಬ್ಬಂದಿಗೆ ಮಾತ್ರ ಈ ಸೌಲಭ್ಯ ನೀಡದಿರುವುದು ಅನ್ಯಾಯವಾಗಿದೆ ಎಂದು ಪ್ರತಿಭಟನಾ ಕಾರರು ಆಕ್ರೋಶ ವ್ಯಕ್ತಪಡಿಸಿದರು.

ಬ್ಯಾಂಕುಗಳಲ್ಲಿ ಈಗಾಗಲೇ 2ನೇ ಮತ್ತು 4ನೇ ಶನಿವಾರಗಳು ರಜೆಯಾಗಿರುವುದರಿಂದ, ಸೋಮವಾರದಿಂದ ಶುಕ್ರವಾರದವರೆಗೆ ಕೆಲಸದ ಸಮಯವನ್ನು ಸ್ವಲ್ಪ ಹೆಚ್ಚಿಸಿ ಉಳಿದ ಶನಿವಾರಗಳನ್ನು ರಜೆ ಎಂದು ಘೋಷಿಸಿದರೂ, ಡಿಜಿಟಲ್ ಬ್ಯಾಂಕಿಂಗ್ ವ್ಯವಸ್ಥೆಯ ಕಾರಣ ಗ್ರಾಹಕರಿಗೆ ಹೆಚ್ಚಿನ ತೊಂದರೆಯಾಗುವುದಿಲ್ಲ ಎಂದು ತಿಳಿಸಿದರು.

ಸರ್ಕಾರ ಕೂಡಲೇ ಈ ವಿಷಯದಲ್ಲಿ ತೀರ್ಮಾನ ಕೈಗೊಂಡು ವಾರಕ್ಕೆ ಐದು ದಿನಗಳ ಕೆಲಸ ವ್ಯವಸ್ಥೆಗೆ ಅನುಮೋದನೆ ನೀಡಬೇಕು ಎಂದು ಒತ್ತಾಯಿಸಿದರು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಇದೇ ವೇಳೆ ಒಕ್ಕೂಟದ ಸಹ ಕಾರ್ಯದರ್ಶಿ ಕುಮಾರ ಯಗ್ಗಟ್ಟಿ ಮಾತನಾಡಿದರು. ಪ್ರತಿಭಟನೆಯಲ್ಲಿ ಸಲಾವುದ್ದಿನ್, ಸೋಮಶೇಖರ, ರಾಜೇಶ ವಿ.ಜೆ, ಪವನ್ ಕುಮಾರ, ಮಲ್ಲಿಕಾರ್ಜುನ, ಗಣೇಶ, ಅಯೂಬ್ ಖಾನ್, ಸಂತೋಷ.ಬಿ, ಮಾಲಾ ಸೇರಿದಂತೆ ಅನೇಕರಿದ್ದರು.

## ಮನುಕುಲದ ಉದ್ಧಾರಕ್ಕಾಗಿ ಅವತರಿಸಿದವರು ಶ್ರೀ ಮಧ್ವಾಚಾರ್ಯರು – ಶ್ರೀ ಅಕ್ಷೋಭ್ಯರಾಮಪ್ರಿಯ ತೀರ್ಥರು






ರಾಯಚೂರು: ಇಡಿ ಮನುಕುಲದ ಉದ್ಧಾರಕ್ಕಾಗಿ ಅವತರಿಸಿದವರು ಶ್ರೀ ಮಧ್ವಾಚಾರ್ಯರು ಎಂದು ಬಾಳಿಗಾರು ಮಠದ ಪೀಠಾಧಿಪತಿಗಳಾದ ಶ್ರೀ ಅಕ್ಷೋಭ್ಯರಾಮಪ್ರಿಯ ತೀರ್ಥ ಶ್ರೀಪಾದಂಗಳವರು ನುಡಿದರು.

ಅವರಿಂದು ನಗರದ ಮುಂಗ್ಲಿ ಪ್ರಾಣದೇವರ ದೇವಸ್ಥಾನದಲ್ಲಿ ಮಧ್ವ ನವಮಿಯ ಅಂಗವಾಗಿ ಹಮ್ಮಿಕೊಂಡಿದ್ದ ಮಹಾನ್ ಜ್ಞಾನ ಸತ್ರ ಕಾರ್ಯಕ್ರಮದಲ್ಲಿ ಸಾನ್ನಿಧ್ಯವಹಿಸಿ ಸಂಸ್ಥಾನ ಪೂಜೆ ನೆರವೇರಿಸಿ ಆಶೀರ್ವಚನ ನೀಡಿದರು.

ಮಧ್ವಾಚಾರ್ಯರು ಪ್ರಾಣದೇವರ ಅವತಾರವಾಗಿದ್ದಾರೆ. ಉಡುಪಿ ಬಳಿಯ ಪಾಜಕದಲ್ಲಿ 13ನೇ ಶತಮಾನದಲ್ಲಿ ಜನಿಸಿದ ಅವರು ಬಾಲ್ಯದಲ್ಲಿಯೆ ಅನೇಕ ಪವಾಡಗಳನ್ನು ಜಗತ್ತಿಗೆ ತೋರಿಸಿದರು.

ಅವರು ಭಗವಂತನ ಲೀಲೆಗಳನ್ನು ತಮ್ಮ ಗ್ರಂಥಗಳಲ್ಲಿ ವರ್ಣಿಸಿದ್ದಾರೆ. ಸರ್ವ ಮೂಲ ಗ್ರಂಥ ಲೋಕಕ್ಕೆ ನೀಡಿ ನಮ್ಮನ್ನು ಉದ್ಧರಿಸಿದ್ದಾರೆ. ಇಂದಿನ ಯುವಕರು ಮಧ್ವಾಚಾರ್ಯ ತತ್ವ ಸಿದ್ಧಾಂತಗಳನ್ನು ಅನುಸಿರಿಸಬೇಕು ದುರ್ಮತಿ ದುಶ್ಚಟಗಳಿಗೆ ಬಲಿಯಾಗದೆ ಉತ್ತಮ ನಾಗರೀಕರಾಗ ಬೇಕು.

ಅನೇಕ ದಶಕಗಳಿಂದ ಕೋಟೆ ಮುಂಗ್ಲಿ ಪ್ರಾಣದೇವರ ದೇವಸ್ಥಾನದಲ್ಲಿ ವಿವಿಧ ಜ್ಞಾನ ಪ್ರಸರಣ, ಆಧ್ಯಾತ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸುತ್ತಿರುವುದು ಶ್ಲಾಘನೀಯ ನಿನ್ನೆ ಮಧ್ವಾಚಾರ್ಯರು ಭಾವಚಿತ್ರದ ಮೆರವಣಿಗೆ ಅತ್ಯಂತ ವರ್ಣರಂಜಿತವಾಗಿ ಭಕ್ತಿಯಿಂದ ನಡೆದಿದ್ದು ಸಂತಸ ತಂದಿದೆ ಎಂದರು.

ಭವ್ಯ ಶೋಭಾಯಾತ್ರೆ: ಸೋಮವಾರ ಸಂಜೆ ರಾಯರ ಮಠದಿಂದ ಶ್ರೀ ಮಧ್ವಾಚಾರ್ಯರ ಭಾವಚಿತ್ರದ ಭವ್ಯ ಶೋಭಾಯಾತ್ರೆ ನಗರದ ಪ್ರಮುಖ ಬೀದಿಗಳಲ್ಲಿ ಹಾದು ಮುಂಗ್ಲಿ ಪ್ರಾಣದೇವರ ದೇವಸ್ಥಾನ ತಲುಪಿತು. ಚಂಡೆ ಮದ್ದಳೆ, ತಾಶ ವಾದ್ಯ, ಗೊಂಬೆ ವೇಷ , ಮಹಿಳೆಯರಿಂದ ಭಜನೆ, ಯುವಕ ಯುವತಿಯರ ನೃತ್ಯ ಮೆರಗು ನೀಡಿತು. ಸಾನಿಧ್ಯವನ್ನು ಶ್ರೀ ಅಕ್ಷೋಭ್ಯರಾಮಪ್ರಿಯ ತೀಥ ್ ಶ್ರೀಪಾದಂಗಳವರು ವಹಿಸಿದ್ದರು. ಪಂಡಿ ತರು, ಬ್ರಾಹ್ಮಣ ಸಮಾಜದ ಮುಖಂಡರು, ಮಹಿಳೆಯರು, ಮಕ್ಕಳು ಭಾಗವಹಿಸಿದ್ದರು. ಡಿವೈಎಸ್ಪಿ, ಸಿಪಿಐ ಹಾಗೂ ಪಿಎಸ್‌ಐ ಶೋಭಾ ಯಾತ್ರೆಗೆ ಸೂಕ್ತ ಬಂದೋಬಸ್ತ್ ಕಲ್ಪಿಸಿದ್ದರು.

## ಗಣರಾಜ್ಯೋತ್ಸವ ಅಂಗವಾಗಿ ಸರ್ವಧರ್ಮ ಟ್ರಸ್ಟ್ ನಿಂದ ವೃದ್ದರು, ವಿದ್ಯಾರ್ಥಿಗಳಿಗೆ ನೆರವು



ಮಾನ್ವಿ: ಗಣರಾಜ್ಯೋತ್ಸವ ಅಂಗವಾಗಿ ಸರ್ವಧರ್ಮ ಸೇವಾ ವೆಲೆ ಟ್ರಸ್ಟ್ ವತಿಯಿಂದ ಸೋಮವಾರ ಮಾನ್ವಿ ಪಟ್ಟಣದ ಸರ್ವ ಶಕ್ತನ ಆಶೀರ್ವಾದ ಪ್ರಾರ್ಥನಾ ಮಂದಿರದಲ್ಲಿ ವಯೋ ವೃದ್ಧರಿಗೆ ಊರುಗೋಲು, ಬೆಡ್ ಶೀಟ್ ಹಾಗೂ ಬಡ ವಿದ್ಯಾರ್ಥಿಗಳಿಗೆ ಶಾಲಾ ಬ್ಯಾಗ್ ವಿತರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಈ ಸಂದರ್ಭದಲ್ಲಿ ಪಾಸ್ಟರ್ ಬಸವರಾಜ. ಕೆ ಮೋಸಸ್ ಇವರು ಮಾತನಾಡಿ, ಗಣರಾಜ್ಯೋತ್ಸವ ದಿನದಂದು ಹನುಮಂತ ಕೋಟೆ ಇವರು ಹಮ್ಮಿಕೊಂಡಿರುವ ಸಾಮಾಜಿಕ ಸೇವಾ ಶ್ಲಾಘನೀಯ. ಇವರ ಸೇವಾ ಕಾರ್ಯ ಇನ್ನಷ್ಟು ಹೆಚ್ಚಾಗಲಿ ಮತ್ತು ದೇಶದಲ್ಲಿ ಪ್ರೀತಿ, ಶಾಂತಿ ಸೌಹಾರ್ದತೆ, ಐಕ್ಯತೆ ನೆಲೆಸಲೆಂದು ನಾವೆಲ್ಲರೂ ಪ್ರಾರ್ಥಿಸೋಣ ಎಂದು ಹೇಳಿದರು.

ಇಂಡಿಯಾ ವೆಲ್ಫೇರ್ ಪಾರ್ಟಿ ಮುಖಂಡ ಮೌಲನಾ ಶೇಖ್ ಫರೀದ್ ಉಮ್ರಿ ಗಣರಾಜ್ಯೋತ್ಸವದ ವಿಶೇಷತೆಯ ಕುರಿತು ಮಾತನಾಡಿ,ಹನುಮಂತ ಕೋಟೆಯವರ ಸಮಾಜ ಸೇವಾ ಕಾರ್ಯಕ್ಕೆ ನಾವೆಲ್ಲರೂ ಕೈಜೋಡಿಸಬೇಕೆಂದು ಹೇಳಿದರು.

ಈ ಕಾರ್ಯಕ್ರಮದಲ್ಲಿ ಪಿಕಾರ್ಡ್ ಬ್ಯಾಂಕಿನ ಮಾಜಿ ಅಧ್ಯಕ್ಷ ಸೈಯದ್ ಆಬೀದ್ ಖಾದ್ರಿ, ಲಿಂಗಸೂರಿನ ಮಲ್ಲಿಕಾರ್ಜುನ ಸ್ವಾಮಿ ಹಿರೇಮಠ ಕರಡಕಲ್, ಗುತ್ತೇದಾರ ಸಿ.ಕೆ ಯೇಸುರಾಜ ಅಮರೇಶ್ವರ ಕ್ಯಾಂಪ್, ಬೆಳಗು ಸಂಸ್ಥೆಯ ಅಧ್ಯಕ್ಷ ಎ.ಶರಣಕುಮಾರ, ನೆರಳು ಅನಾಥಾಶ್ರಮದ ಮುಖ್ಯಸ್ಥ ಚನ್ನಬಸವಸ್ವಾಮಿ, ಬಿ.ಎಸ್. ಎಸ್ ಜಿಲ್ಲಾಧ್ಯಕ್ಷ ಶಾಹರಬಾಲು ಹಾಗೂ ಇತರ ಮು ಖಂಡರು ಭಾಗವಹಿಸಿದರು.

## ನವರತ್ನಯುವಕ ಸಂಘದಿಂದ ಫೆ.14ರಂದು ಮಾದಿಗ ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪುರಸ್ಕಾರ–ಕೆ.ಪಿ.ಅನಿಲಕುಮಾರ



ರಾಯಚೂರು: ಪ್ರತಿವರ್ಷದಂತೆ ಈ ವರ್ಷ ಫೆ.14 ರಂದು ಮಾದಿಗ ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನಗರದ ಹರಿಜನವಾಡದ ಸಮೂದಾಯಭವನದಲ್ಲಿ ಸಂಜೆ 6 ಗಂಟೆಗೆ ಆಯೋಜಿಸಲಾಗಿದೆ ಎಂದು ನವರತ್ನ ಯುವಕ ಸಂಘದ ಮುಖಂಡ ಕೆ.ಪಿ.ಅನಿಲ್‌ಕುಮಾರ ಹೇಳಿದರು.

ಅವರಿಂದು ಮಾಧ್ಯಮಗೋಷ್ಠಿ ಉದ್ದೇಶಿಸಿ ಮಾತನಾಡಿ, 2024–25 ಸಾಲಿನಲ್ಲಿ ಎಸ್‌ಎಸ್ ಎಲ್‌ಸಿ, ಪಿಯುಸಿ, ಸ್ನಾತಕೋತ್ತರ ಪದವಿ ವರೆಗೆ ಪ್ರಥಮ ಸ್ಥಾನದಲ್ಲಿ ತೇರ್ಗಡೆಯಾದ ಸಮಾಜ ವಿದ್ಯಾರ್ಥಿ ವಿದ್ಯಾರ್ಥಿನಿಯರು ಫೆ.8 ರೊಳಗೆ ಹೆಸರು ನೊಂದಾಯಿಸಿಕೊಳ್ಳಬೇಕಿದೆ.

ಸ್ವವಿವರ, ಅಂಕಪಟ್ಟಿ, ಜಾತಿ ಪ್ರಮಾಣ ಪತ್ರ, ಆಧಾರ ಕಾರ್ಡ, ಎರಡು ಭಾವಚಿತ್ರದೊಂದಿಗೆ ಹರಿಜನವಾಡದ ಸಮೂದಾ ಯದಲ್ಲಿ ಅರ್ಜಿ ಸಲ್ಲಿಸಲು ಮನವಿ ಮಾಡಿದರು.

ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಶಾಸಕ ಡಾ.ಶಿವರಾಜ ಪಾಟೀಲ್ ಉದ್ಘಾಟಿಸಲಿದ್ದಾರೆ. ಅಧ್ಯಕ್ಷತೆ ಯನ್ನು ವಿಧಾನ ಪರಿಷತ್ ಸದಸ್ಯ ಎ.ವಸಂತ ಕುಮಾರ ವಹಿಸಿಕೊ ಳ್ಳಲಿದ್ದಾರೆ. ಮುಖ್ಯ ಅತಿಥಿಗಳಾಗಿ ಪಾಲಿಕೆ ಮಾಜಿ ಮಹಾಪೌರರಾದ ನರಸಮ್ಮ ನರಸಿಂಹಲು ಮಾಡಗಿರಿ, ನಗರಸಭೆ ಮಾಜಿ ಅಧ್ಯಕ್ಷ ಹೇಮಲತಾ ಬೂದೆಪ್ಪ, ಪಾಲಿಕೆ ಸದಸ್ಯ ಎನ್.ಕೆ.ನಾಗರಾಜ, ಜೆಡಿಎಸ್ ಜಿಲ್ಲಾಧ್ಯಕ್ಷ ಎಂ.ವಿರೂಪಾಕ್ಷಿ, ಪಾಲಿಕೆ ಸದಸ್ಯ ಎಂ.ಪವನಕುಮಾರ, ಪಿ.ಯಲ್ಲಪ್ಪ, ರವೀಂದ್ರ ಜಲ್ದಾರ, ನರಸಿಂಹಲುಮಾಡಗಿರಿ, ಈರಣ್ಣ ಭಂಡಾರಿ, ಜೆ.ತಿಮ್ಮಪ್ಪ, ರೆಡಿ ತಿಮ್ಮಯ್ಯ ವಕೀಲ, ಅಂಬಣ್ಣ ಆರೋಲಿಕರ್, ಕರುಣಾಕರ ಕಟ್ಟಿಮನಿ, ಟಿ.ರೆಡ್ಡಿ. ಉಪನ್ಯಾಸಕರು, ರಾಜಾ ಶ್ರೀ ನಿವಾಸ, ಪಿ.ಅಮರೇಶ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದಾರೆ ಎಂದರು.

ಈ ಸಂದರ್ಬದಲ್ಲಿ ಸಂಘದ ಅಧ್ಯಕ್ಷ ಶರಣಪ್ಪ, ಆರ್.ಆಂಜಿನೇಯ್ಯ, ಚಂದ್ರಭಂಡಾರಿ,ಎಸ್. ಹುಲಿಗೆಪ್ಪ, ಜನಾರ್ಧನ ಹಳ್ಳಿಬೆಂಚಿ,ಎಸ್.ವೆಂಕಟೇಶ, ಈರೇಶ, ನಾಗರಾಜ ಉಪಸ್ಥಿತರಿದ್ದರು.

## ಬೀದಿ ವ್ಯಾಪಾರಸ್ತರ ಅಂಗಡಿಗಳನ್ನು ತೆರವು ಗೊಳಿಸದಿರಲು ಮನವಿ



ಲಿಂಗಸುಗೂರು: ಕುಟುಂಬದ ನಿರ್ವಹಣೆ, ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗಲೆಂದು ಮಾಡುತ್ತಿರುವ ಬಡ ಬೀದಿ ಬದಿ ವ್ಯಾಪಾಸ್ಥರನ್ನು ತೆರವುಗೊಳಿಸುವುದನ್ನು ತಡೆಯಬೇಕು ಎಂದು ಬೀದಿ ಬದಿ ವ್ಯಾಪಾರಸ್ಥರು ಪ್ರತಿಭಟನೆ ನಡೆಸಿದರು.

ಪಟ್ಟಣದ ಬಸ್ ನಿಲ್ದಾಣದಿಂದ ಪುರಸಭೆವರೆಗೆ ಹಾಗೂ ಸಹಾಯಕ ಆಯುಕ್ತರ ಕಾರ್ಯಾಲಯದ ವರೆಗೆ ಜಾಥ ಮೂಲಕ ಪ್ರತಿಭಟನೆ ಮಾಡಿ ಸುಮಾರು ವರ್ಷಗಳಿಂದ ತಳ್ಳು ಬಂಡಿಯಲ್ಲಿ ಸಣ್ಣ ಪುಟ್ಟ ವ್ಯಾಪಾರಗಳನ್ನು ಮಾಡಿಕೊಂಡು ಬರುತಿದ್ದು. ನಮ್ಮ ಕುಟುಂಬದ ಉಪ ಜೀವನಕ್ಕೆ ದಾರಿಯಾಗಿದೆ. ಆದರೆ ಪುರಸಭೆ ಅಧಿಕಾರಿಗಳು ಏಕ ಏಕಿ ಜಾಗ ಕಾಲಿ ಮಾಡುವಂತೆ ಸೂಚನೆ ನೀಡಿದ್ದು ಬೀದಿ ಬದಿ ವ್ಯಾಪಾರಸ್ತರಿಗೆ ಮುಂದಿನ ತಮ್ಮ ಮಕ್ಕಳ ಮತ್ತು ಕುಟುಂಬ ನಿರ್ವಹಣೆ ಬಗ್ಗೆ ಚಿಂತಿಸುವಂತಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪಿ ಎಂ ಸ್ವಾನಿಧಿ ಅಡಿಯಲ್ಲಿ ಸಾಲ ಕೊಟ್ಟ ಪುರಸಭೆ ಈಗ ಏಕ ಏಕಿ ನಮ್ಮ ವ್ಯಾಪಾರ ಸ್ಥಳಗಳನ್ನು ಖಾಲಿ ಮಾಡಿಸಿದರೆ ಸಾಲ ಕಟ್ಟುವುದಾದರು ಹೇಗೆ, ಬೀದಿ ಬದಿ ವ್ಯಾಪಾರಸ್ಥರಿಗಾಗಿ ಸರ್ವೋಚ್ಚ ನ್ಯಾಯಾಲಯ ಮಾಡಿರುವ ಆದೇಶವನ್ನು ಪಾಲಿಸದೇ ಬಡ ಜನರ ಜೀವನದ ಜೊತೆ ಅಧಿಕಾರಿಗಳು ಚಲ್ಲಟವಾಡುತ್ತಿದ್ದಾರೆ. ಕುಂದು ಕೊರತೆ ನಿವಾರಣಾ ಸಮಿತಿಯನ್ನು ರಚಿಸದೆ ವ್ಯಾಪಾರಸ್ತರಿಗೆ ಅನುಕೂಲವಾಗುವ ರೀತಿಯಲ್ಲಿ ಕ್ರಮ ಕೈಗೊಳ್ಳದೆ ನಿರ್ಧಾರ ಮಾಡಿದ್ದು ಅಧಿಕಾರಿಗಳ ಬೇಜ ವಾಬ್ದಾರಿತವಾಗಿದೆ ಎಂದು ದೂರಿದರು. ಸಂಚಾರಕ್ಕೆ ಅನುಕೂಲ ಆಗುವ ರೀತಿಯಲ್ಲಿ, ಮತ್ತು ಸ್ವಚ್ಛತೆ ಕಾಪಾಡುವಲ್ಲಿ ನಿಬಂದನೆಗಳನ್ನು ಹಾಕಿ ವ್ಯಾಪಾರ ಮಾಡಲು ಅನುವು ಮಾಡಿಕೊಡಬೇಕು. 569 ಜನ ಬೀದಿ ಬದಿ ವ್ಯಾಪಾರಸ್ಥರ ಕುಟುಂಬಗಳ ಬಗ್ಗೆ ಯೋಚನೆ ಮಾಡಿ ಸರಿಯಾದ ನಿರ್ಧಾರ ಕೈಗೊಳ್ಳಬೇಕು ಎಂದು ಪುರಸಭೆ ಅಧಿಕಾರಿಗೆ ಹಾಗೂ ಸಹಾಯಕ ಆಯುಕ್ತರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಹಿಬೂಬ್ ಪಾಷಾ, ಹಸ್ಮಾತ್, ಯೇಶುಮಿತ್ರಾ, ನೀಲಕಂಠ ಅನಿಲ್, ರೇಣುಕಾ ನಿತ್ಯಾನಂದ,ಕೇಶವ ರಾಠೋಡ್, ಮಹಾಂತೇಶ,ರಾಬಿಯ ಸೇರಿದಂತೆ ಬೀದಿ ಬದಿ ವ್ಯಾಪಾರಸ್ಥರು ಇದ್ದರು.

## ಸಿರವಾರ ಪಟ್ಟಣದಲ್ಲಿ ಬೀಡಾಡಿ ದನಗಳ ಅಟ್ಟಹಾಸ: ವಾಹನ ಸವಾರರ ಪ್ರಾಣಕ್ಕೆ ಸಂಚಕಾರ!



ಸಿರವಾರ: ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಬೀಡಾಡಿ ದನಗಳ ಹಾವಳಿ ಮಿತಿಮೀರಿದ್ದು, ವಾಹನ ಸವಾರರು ಹಾಗೂ ಸಾರ್ವಜನಿಕರು ಜೀವ ಕೈಯಲ್ಲಿ ಹಿಡಿದು ಓಡಾಡುವಂತಾಗಿದೆ. ರಸ್ತೆ ಮಧ್ಯದಲ್ಲೇ ದನಗಳು ಠಿಕಾಣಿ ಹೂಡುತ್ತಿರುವುದರಿಂದ ಸಂಚಾರ ದಟ್ಟಣೆ ಉಂಟಾಗುತ್ತಿದ್ದು, ಅಪಘಾತಗಳ ಸಂಖ್ಯೆಯೂ ಏರಿಕೆಯಾಗುತ್ತಿದೆ.

**ರಸ್ತೆಯೇ ಗೋಶಾಲೆ:** ಸಿರವಾರದ ಮುಖ್ಯ ರಸ್ತೆ, ಬಸ್ ನಿಲ್ದಾಣದ ರಸ್ತೆ ಹಾಗೂ ಮಾರುಕಟ್ಟೆ ಪ್ರದೇಶಗಳಲ್ಲಿ ದನಗಳು ಹಿಂಡು ಹಿಂಡಾಗಿ ನಿಲ್ಲುತ್ತಿವೆ. ಇದರಿಂದಾಗಿ ದ್ವಿಚಕ್ರ ಹಾಗೂ ನಾಲ್ಕು ಚಕ್ರದ ವಾಹನ ಸವಾರರು ಸಾಗಲು ಜಾಗವಿಲ್ಲದಂತಾಗಿದೆ.

ರಾತ್ರಿಯ ವೇಳೆಯಂತೂ ರಸ್ತೆ ಮಧ್ಯೆ ಕುಳಿತಿರುವ ದನಗಳು ಕಣ್ಣಿಗೆ ಕಾಣದೆ ಸವಾರರು ಬಿದ್ದು ಗಾಯಗೊಂಡಿರುವ ನಿದರ್ಶನಗಳು ಸಾಕಷ್ಟಿವೆ.

**ವಾಹನ ಸವಾರರ ಆಕ್ರೋಶ:** ಕೆಲಸದ ಅವಸರದಲ್ಲಿ ಹೋಗುವಾಗ ದನಗಳು ಅಡ್ಡ ಬಂದು ಸಡನ್ ಬ್ರೇಕ್ ಹಾಕಬೇಕಾಗುತ್ತದೆ. ಇದರಿಂದ ಹಿಂದಿನಿಂದ ಬರುವ ವಾಹನಗಳು ಡಿಕ್ಕಿಯಾಗುವ ಸಂಭವವಿರುತ್ತದೆ. ಪಟ್ಟಣ ಪಂಚಾಯತ್ ಈ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು" ಎಂದು ಸ್ಥಳೀಯ ವಾಹನ ಸವಾರರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

**ಸಂಚಾರಕ್ಕೆ ಅಡ್ಡಿ:** ಮಾರುಕಟ್ಟೆ ದಾರಿಯಲ್ಲಿ ದನಗಳ ಕಾಟದಿಂದಾಗಿ ಗಂಟೆಗಟ್ಟಲೆ ಟ್ರಾಫಿಕ್ ಜಾಮ್ ಉಂಟಾಗುತ್ತಿದೆ.

**ಅಪಘಾತಗಳ ಭೀತಿ:** ದನಗಳ ನಡುವಿನ ಕಾದಾಟದಿಂದ ಪಾದಚಾರಿಗಳು ಮತ್ತು ಶಾಲಾ ಮಕ್ಕಳಿಗೆ ಏಟು ಬೀಳುವ ಅಪಾಯವಿದೆ.

**ನಿರ್ಲಕ್ಷ್ಯದ ಆರೋಪ:** ದನಗಳ ಮಾಲೀಕರಿಗೆ ದಂಡ ಹಾಕದೆ ಅಥವಾ ದನಗಳನ್ನು ದೊಡ್ಡಿಗೆ ಹಾಕದೆ ಅಧಿಕಾರಿಗಳು ನಿರ್ಲಕ್ಷ್ಯ ವಹಿಸುತ್ತಿದ್ದಾರೆ ಎಂದು ಸಾರ್ವಜನಿಕರು ದೂರುತ್ತಿದ್ದಾರೆ.

**ಸಾರ್ವಜನಿಕರ ಆಗ್ರಹ:** ಪಟ್ಟಣ ಪಂಚಾಯತ್ ನೂತನ ಅಧ್ಯಕ್ಷರು ಹಾಗೂ ಅಧಿಕಾರಿಗಳು ಕೂಡಲೇ ಈ ಬಗ್ಗೆ ಗಮನ ಹರಿಸಬೇಕು.

ರಸ್ತೆಯಲ್ಲಿ ತಿರುಗಾಡುವ ದನಗಳನ್ನು ಮಾಲೀಕರು ತಮ್ಮ ಮನೆಯಲ್ಲಿ ಕಟ್ಟಿ ಹಾಕುವಂತೆ ಸೂಚಿಸಬೇಕು ಅಥವಾ ಪಟ್ಟಣ ಪಂಚಾಯತ್ ವತಿಯಿಂದ ಸೂಕ್ತ ಜಾಗಕ್ಕೆ ಸ್ಥಳಾಂತರಿಸಬೇಕು ಎಂದು ಸಿರವಾರದ ಜನತೆ ಒತ್ತಾಯಿಸಿದ್ದಾರೆ.

## ಆಹಾರ ಇಲಾಖೆಯಲ್ಲಿ ಶಾಮೀಲಾದ ಶಿವಪ್ಪ ಹಳ್ಳಿ ಹೊಸೂರು ವಿರುದ್ಧ ತಕ್ಷಣ ಕಠಿಣ ಕ್ರಮಕ್ಕೆ ಹನುಮೇಶ ನಾಯಕ ಆಗ್ರಹ

ಮಾನ್ವಿ: ಆಹಾರ ಇಲಾಖೆಯಲ್ಲಿ ಶಾಮೀ ಲಾದ ಶಿವಪ್ಪ ಹಳ್ಳಿ ಹೊಸೂರು ಅವರು ಇಲಾಖೆಯ ನಿಯಮಗಳನ್ನು ಧಿಕ್ಕರಿಸಿ ಇಲಾಖೆಯಲ್ಲಿ ನಿವೃತ್ತಿಯಾದರೂ ಕೂಡ ಅವರು ಅನೈತಿಕ ಹಾಗೂ ಸ್ವೇಚ್ಛಾಚಾರಿಯಾಗಿ ವರ್ತಿಸುತ್ತಿದ್ದಾರೆ ಎಂದು ಹನುಮೇಶ ನಾಯಕ ಇವರು ಒತ್ತಾಯ ಮಾಡಿದ್ದಾರೆ. ಸರ್ಕಾರದ ಮಹತ್ವದ ಯೋಜನೆಗಳಾದ ಆಹಾರ ಧಾನ್ಯ ವಿತರಣೆಯಲ್ಲಿ ಉದ್ದೇಶಪೂರ್ವಕ ಅಕ್ರಮ, ಅರ್ಹ ಫಲಾನುಭವಿಗಳಿಗೆ ವಂಚನೆ ಹಾಗೂ ಅಧಿಕಾರ ದುರುಪಯೋಗ ನಡೆಸಲಾಗಿದೆ ಎಂಬ ಆರೋಪಗಳು ಇವೆ. ಶಿವಪ್ಪಗೌಡ ಅವರು ನ್ಯಾಯ ಬೆಲೆ ಅಂಗಡಿಯ ಮಾಲೀಕರಿಗೆ ಕಡಿಮೆ ಅಕ್ಕಿ ನೀಡುತ್ತಿದ್ದಾರೆ ಇದರಿಂದ ಜನರಿಗೆ ಬಹಳ ಅನ್ಯಾಯವಾಗುತ್ತಿದ್ದು ಇದರಲ್ಲಿ ಇಲಾಖೆ ಡಿಡಿ ಹಾಗೂ ತಹಸೀಲ್ದಾರ್ ಇವರು ಸಂಪೂರ್ಣವಾಗಿ ಅಕ್ರಮಕ್ಕೆ ಪ್ರೋತ್ಸಾಹ ನೀಡುತ್ತಿದ್ದಾರೆ. ಇದರಿಂದ ಬಡ ಹಾಗೂ ಶ್ರಮಿಕ ವರ್ಗದ ಜನರಿಗೆ ತೀವ್ರ ಅನ್ಯಾಯವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಶಿವಪ್ಪ ಹಳ್ಳಿ ಹೊಸೂರು ಅವರ ಕಾರ್ಯವೈಖರಿಯಿಂದ ಇಲಾಖೆಯ ಗೌರವಕ್ಕೆ ಧಕ್ಕೆ ಉಂಟಾಗಿದ್ದು, ಮೇಲಾಧಿ ಕಾರಿಗಳು ಕಣ್ಣುಮುಚ್ಚಿ ಕುಳಿತಿದ್ದಾರೆ. ಇಂತಹವರ ವಿರುದ್ಧ ನ್ಯಾಯಾಂಗ ಅಥವಾ ಇಲಾಖಾ ಮಟ್ಟದ ಸಮಗ್ರ ತನಿಖೆ ನಡೆಸಬೇಕು. ಇಲಾಖೆಯವರಿಗೆ ಹನುಮೇಶ ನಾಯಕ ಅವರು ಕಾಲ್ ಮಾಡಿದರೆ ಯಾವುದೇ ರೀತಿಯಿಂದ ಪ್ರತಿಕ್ರಿಯೆ ನೀಡುತ್ತಿಲ್ಲ. ಅಕ್ರಮವಾಗಿ ಸಾಗಿಸುತ್ತಿರುವ ಅಕ್ಕಿ ಗಾಡಿಗಳನ್ನು ತಡೆ ಹಿಡಿದರೆ ಯಾವಬ್ಬ ಅಧಿಕಾರಿಗಳು ಇದಕ್ಕೆ ಸಂಬಂಧ ಇಲ್ಲ ಎನ್ನುವ ರೀತಿಯಲ್ಲಿ ವರ್ತನೆ ಮಾಡುತ್ತಾರೆ ಎಂದು ಹನುಮೇಶ ನಾಯಕ ಇವರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮ ಕೈಗೊಳ್ಳದಿದ್ದರೆ ಹೋರಾಟ, ಪ್ರತಿಭಟನೆ ಮಾಡಲಾಗುತ್ತಿದೆ.

## ಇಸಿಸಿಇ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರಿಗೆ ಗೌರವಧನ ನೀಡಲು ಮನವಿ



ಮುದಗಲ್: 2025–26ನೇ ಸಾಲಿನ ಅಡಿಯಲ್ಲಿ ಇ ಸಿ ಸಿ ಇ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರಿಗೆ ಮತ್ತು ಆಯಾರವರಿಗೆ ಗೌರವಧನ ಬಿಡುಗಡೆಗೊಳಿಸಬೇಕೆಂದು ಶಾಸಕ ವಜ್ಜಲ್ ಪುತ್ರ ಈಶ್ವರ, ಎಂ,ವಜ್ಜಲರವರಿಗೆ ಮನವಿ ಪತ್ರ ಸಲ್ಲಿಸಿದ್ದಾರೆ.

ಲಿಂಗಸ್ಗೂರು ತಾಲೂಕಿನ 34 ಹಳ್ಳಿಗಳಲ್ಲಿ 2025 26 ನೇ ಸಾಲಿನಲ್ಲಿ ಕೆ ಕೆ ಆರ್ ಡಿ ಬಿ ಅಡಿಯಲ್ಲಿ ಇ ಸಿ ಸಿ ಇ ಶಾಲೆಗಳಲ್ಲಿ ಶಿಕ್ಷಕರು ಮತ್ತು ಆಯರವರು ಜೂನ್ ತಿಂಗಳಿನಿಂದ ಸೇವೆ ಸಲ್ಲಿಸುತ್ತಿದ್ದಾರೆ. ಎಂಟು ತಿಂಗಳುಗಳು ಕಳೆದರೂ ಯಾವುದೇ ಗೌರವ ಧನವನ್ನು ಪಡೆದಿರುವುದಿಲ್ಲ ಹಲವಾರು ಶಿಕ್ಷಕರು ಒಂದು ಸ್ಥಳದಿಂದ ಬೇರೆ ಊರಿಗೆ ಹೋಗಿ ಸೇವೆ ಸಲ್ಲಿಸುತ್ತಿದ್ದಾರೆ ಪ್ರತಿದಿನವೂ ಹೋಗುವ ಶಾಲೆಗಳಿಗೆ ಆಟೋದಲ್ಲಿ ಹೋಗುತ್ತಿದ್ದೇವೆ ಪ್ರತಿ ತಿಂಗಳು ವಾಹನಗಳಿಗೆ ಸಾವಿರ ರೂಪಾಯಿಗಳನ್ನು ನೀಡಿ ಹೋಗುತ್ತಿದ್ದೇವೆ.

Editor:S.K.Wadeyar, #69 ”VISPATHI”, B,Block S.O.G. Colony Davanagere-577005,Karnataka.
Publisher:S.K.Wadeyar, #69 ”VISPATHI”, B,Block S.O.G. Colony Davanagere-577005,Karnataka.
Printer:S.K.Wadeyar, SUCHITHRA PRINTERs & PUBLISHERs # 69 ”VISPATHI”,B,Block S.O.G.Colony Davanagere-577005,Karnataka
Owner:S.K.Wadeyar, #69 ”VISPATHI”, B,Block S.O.G.Colony, Davanagere-577005,Karnataka